**ಸಿ.ಸಿ.ನಂ.9125/2022**

**ಪಿಡಬ್ಲ್ಯೂ-3**

**ಸಾಕ್ಷಿಯನ್ನು ದಿನಾಂಕ 17-07-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ನಾನು ಬಿ ಇ ಮುಗಿಸಿ ನಂತರ ಎಂಬಿಎ ಮಾಡಿರುತ್ತೇನೆ. ನನ್ನ ಚಿಕ್ಕಪ್ಪ ಷಡಕ್ಷರ ಸ್ವಾಮಿಯವರು ಇದ್ದಾಗ ಅವರು ಮತ್ತು ನಾವು ಒಂದೇ ಮನೆಯಲ್ಲಿ ವಾಸವಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ಪ್ರತಿ ದಿನ ಊಟಕ್ಕೆ ನಮ್ಮ ಮನೆಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ.

2003 ರಲ್ಲಿ ನನ್ನ ವಿದ್ಯಾಭ್ಯಾಸ ಮುಗಿಸಿ ಅದೇ ವರ್ಷದ ಕೊನೆಯಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ನಾನು ಅಮೇರಿಕಾದಲ್ಲಿ Investment Management ಆಗಿ ಕೆಲಸ ಮಾಡುತ್ತಿದ್ದೇನೆ.

2016 ರಲ್ಲಿ ನಾನು ಪ್ಲಾಟನ್ನು ಖರೀದಿ ಮಾಡಿದ ಸಮಯದಲ್ಲಿ ಯಾವುದೇ ಬ್ಯಾಂಕಿನಿಂದ ಸಾಲ ಪಡೆದಿರುವುದಿಲ್ಲ. ಸದರಿ ಪ್ಲಾಟನ್ನು ಖರೀದಿ ಮಾಡಿದ ನಂತರ ನನ್ನ ಚಿಕ್ಕಪ್ಪ ಷಡಕ್ಷರ ಸ್ವಾಮಿಯವರು ಒಂದು ಕಚೇರಿಯನ್ನು ಮಾಡಿಕೊಂಡಿದ್ದರು ಎಂದರೆ ಸರಿ. 2016 ನವೆಂಬರ್ ನಲ್ಲಿ ನಾನು ಖರೀದಿ ಮಾಡಿದ್ದು 6 ತಿಂಗಳ ನಂತರ ನನ್ನ ಚಿಕ್ಕಪ್ಪ ಷಡಕ್ಷರ ಸ್ವಾಮಿಯವರು ಕಚೇರಿ ಪ್ರಾರಂಭಿಸಿದ್ದರು. ನನ್ನ ಚಿಕ್ಕಪ್ಪ ಕಚೇರಿ ಪ್ರಾರಂಭಿಸುವ ವೇಳೆಗೆ ನಾನು ಭಾರತದಲ್ಲಿ ಇರಲಿಲ್ಲ ಎಂದರೆ ಸರಿ. ನನ್ನ ಚಿಕ್ಕಪ್ಪ ಸದರಿ ಪ್ಲಾಟ್ ನಲ್ಲಿ ತನಗೆ ಬೇಕಾದ ರೀತಿಯಲ್ಲಿ ಇಂಟೆರಿಯರ್ ಅನ್ನು ಮಾಡಿಸಿಕೊಂಡಿದ್ದರು ಎಂದರೆ ಸರಿ.

ನನ್ನ ಚಿಕ್ಕಪ್ಪ ತೀರಿಕೊಂಡ ನಂತರ ಅಪಾರ್ಟ್ ಮೆಂಟ್ ಅಸೋಸಿಯೇಷನ್ ಕಾರ್ಯದರ್ಶಿ ನಾಗಭೂಷಣ್ ನನ್ನ ಪ್ಲಾಟ್ ನಲ್ಲಿ ನೀರು ಸೋರಿಕೆಯಾಗುತ್ತಿದ್ದ ಬಗ್ಗೆ ನನಗೆ ಪೋನ್ ಮಾಡಿ ತಿಳಿಸಿರುತ್ತಾರೆ. ಇದಕ್ಕಿಂತ ಮೊದಲು ಪ್ಲಾಟ್ ನಲ್ಲಿ ನೀರು ಸೋರಿಕೆಯಾಗುತ್ತಿದ್ದ ಬಗ್ಗೆ ನನಗೆ ಯಾರು ತಿಳಿಸಿರುವುದಿಲ್ಲ. ನನಗೆ ಪೋನ್ ಬಂದ

ದಿನದಂದೇ ನಾನು ನನ್ನ ತಂದೆ ತಾಯಿಗೆ ತಿಳಿಸಿದ್ದು ಅದೇ ದಿನ ಅವರು ಹೋಗಿ ಪ್ಲಾಟನ್ನು ನೋಡಿರುತ್ತಾರೆ. ನನ್ನ ತಂದೆ ತಾಯಿ ಹೋದಾಗ ಬೇರೆಯವರು ಇದ್ದ ಬಗ್ಗೆ ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ. ಸದರಿ ಬೇರೆಯವರು ಯಾರು ಎಂದು ಹೇಳಿರುವುದಿಲ್ಲ. ನಂತರ ಕಾವಲುಗಾರರು ಸಂತೋಷ್ ಶೆಟ್ಟಿ ಸದರಿ ಪ್ಲಾಟ್ ನಲ್ಲಿ ಇರುವುದಾಗಿ ತಿಳಿಸಿರುತ್ತಾರೆ, ಸದರಿ ಸಂತೋಷ್ ಶೆಟ್ಟಿಯವರನ್ನು ನಾನು ಭೇಟಿ ಮಾಡಿ ಮಾತನಾಡಿರುವುದಿಲ್ಲ ಆದರೆ ಫೋನ್ ನಲ್ಲಿ ಅವರೊಂದಿಗೆ ಮಾತನಾಡಿರುತ್ತೇನೆ. ಸಂತೋಷ್ ಶೆಟ್ಟಿಯವರು ನನ್ನ ತಾಯಿಗೆ ಫೋನ್ ಮಾಡಿದ್ದು ನಾನು ನನ್ನ ತಾಯಿಯಿಂದ ಅವರ ನಂಬರ್ ಪಡೆದು ನಂತರ ಅವರಿಗೆ ಫೋನ್ ಮಾಡಿ ಮಾತನಾಡಿರುತ್ತೇನೆ.

ಷಡಕ್ಷರ ಸ್ವಾಮಿಯವರು ಕ್ರಯದ ಹಣ ಪಾವತಿ ಮಾಡಿ ನನ್ನ ಹೆಸರಿನಲ್ಲಿ ಸದರಿ ಪ್ಲಾಟನ್ನು ಖರೀದಿ ಮಾಡಿದ್ದು ಅವರೇ ಮಾಲೀಕರಾಗಿದ್ದು ಅವರು ತೀರಿಕೊಂಡ ನಂತರ ಅವರ ಪತ್ನಿ ಆರೋಪಿ ತಾವೇ ಮಾಲೀಕರೆಂದು ಕೇಳಿ ನನ್ನ ವಿರುದ್ಧ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆ ಆರೋಪಿ ನನ್ನ ವಿರುದ್ಧ ಸಲ್ಲಿಸಿದ್ದಾರೆ ಎಂಬ ಕಾರಣಕ್ಕೆ ನಾನು ನನ್ನ ತಾಯಿ ಮೂಲಕ ಈ ಸುಳ್ಳು ದೂರು ಕೊಡಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ ಒ**

**8 ನೇ ಅ. ಮು. ಮ. ದಂ. ನ್ಯಾ.**